ಮಿತ್ರರೂ ಕೂಡ ಅಪಾರ ಪರಿಸರ ಪ್ರೇಮಿಗಳು. 'ಪ್ರಜಾವಾಣಿ'ಯ ವಿಜ್ಞಾನ ವಿಶೇಷ ಅಂಕಣವನ್ನು ಓದಿ ಶಿಕ್ಷಕರ ಕೋಣೆಯಲ್ಲಿ ಅದರ ಕುರಿತು ಚರ್ಚಿಸುತ್ತಿದ್ದೆವು. ಆನಂತರ 'ವಿಜ್ಞಾನ ವಿಶೇಷ'ದ ಲೇಖಕರಾದ ನಾಗೇಶ ಹೆಗಡೆಯವರೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮ ಕೂಡ ಮಾಡಿದೆವು. ಇದರ ಜೊತೆ ಜೊತೆಗೆ ಹೆಮ್ಮರಗಾಲದ ಮಕ್ಕಳು ಪ್ರತಿಭಾಕಾರಂಜಿ ನಾಟಕ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲೂ ಭಾಗವಹಿಸುವಂತಾದರು.

ಇದೆಲ್ಲ ಜರುಗುತ್ತಿರುವಾಗಲೇ ನಾನು ಹೆಚ್ಚುವರಿ ಶಿಕ್ಷಕನಾಗಿ ಹೆಮ್ಮರಗಾಲ ತೊರೆಯುವ ಕಾಲ ಬಂದಿತ್ತು. ತಾಲ್ಲೂಕಿನಲ್ಲಿ ನಾಟಕದ ಮೇಷ್ಟ್ರ ಹುದ್ದೆ ಒಂದೇ ಇರುವುದು, ಅದು ನಂಜನಗೂಡಿನಲ್ಲೇ ಉಳಿಯಬೇಕೆಂದು ಆಗಿನ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಚಂದ್ರಪಾಟೀಲ್ ಅವರು, ಹೆಗ್ಗಡಹಳ್ಳಿ ಶಾಲೆಗೆ ಹುದ್ದೆ ಸಮೇತ ವರ್ಗಾವಣೆಗೊಳ್ಳುವಂತೆ ಮಾಡಿ ನಂಜನಗೂಡು ತಾಲ್ಲೂಕಿನಲ್ಲಿಯೇ ಉಳಿಯುವಂತೆ ನೋಡಿಕೊಂಡರು. ಹೆಮ್ಮರಗಾಲದ ಮೂರೂವರೆ ವರ್ಷಗಳ ಪಯಣ ಹೆಗ್ಗಡಹಳ್ಳಿಯಲ್ಲಿ ಮುಂದುವರಿಯಿತು.

ಒಂದೇ ತಾಲ್ಲೂಕಿನಲ್ಲಿದ್ದರೂ ಹೆಮ್ಮರಗಾಲ ಬರಪೀಡಿತ ಜಾಗ. ಹೆಗ್ಗಡಹಳ್ಳಿ ಸಮೃದ್ಧ ನೀರಾವರಿಯನ್ನು ಹೊಂದಿದ ಜಾಗ. ಹೆಗ್ಗಡಹಳ್ಳಿ ಶಾಲೆಯಲ್ಲಿ ನಾಟಕದ ಮೇಷ್ಟ್ರು ಅಂದರೆ ಏನು? ಎಂಬ ಪ್ರಶ್ನೆ ಕಾಡಲಿಲ್ಲ. ಮಕ್ಕಳೊಂದಿಗೆ ಹೆಜ್ಜೆ ಹಾಕುವುದಕ್ಕೆ ಸಿದ್ಧವಾಗಿದ್ದೆ, ಮಕ್ಕಳೂ ತಯಾರಾಗಿದ್ದರು.

## ವಿಜ್ಞಾನ ನಾಟಕಗಳು

ಶಾಲಾ ಪಠ್ಯದಲ್ಲಿ ಬರುವ ಅಂಶಗಳು, ಪರಿಸರ ಕಾಳಜಿಯ ವಸ್ತುಗಳನ್ನಿಟ್ಟುಕೊಂಡು ಮತ್ತೆ ಮತ್ತೆ ವಿಜ್ಞಾನ ನಾಟಕಗಳನ್ನು ಕಟ್ಟಿದೆವು. ಸ್ಪರ್ಧೆಗಾಗಿ ಈ ನಾಟಕಗಳು ತಯಾರಾಗುತ್ತಿದ್ದರೂ ನಾಟಕದ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾ ನಾನು ಮತ್ತು ಮಕ್ಕಳು ವಿಜ್ಞಾನದ ಹಲವಾರು ವಿಚಾರಗಳನ್ನು ತಿಳಿದುಕೊಳ್ಳುವಂತಾಯಿತು. ಹಿರಿಯರಾದ ನಾಗೇಶ ಹೆಗಡೆಯವರು ಪ್ರತೀ ನಾಟಕಕ್ಕೂ ಮಾರ್ಗದರ್ಶನ ನೀಡುತ್ತಿದ್ದರು. ನಾನು ನಾಟಕಗಳನ್ನೂ ಬರೆಯುತ್ತಾ, ಅದೂ ನಮ್ಮ ಮಕ್ಕಳು ಮಾತನಾಡುವ ಭಾಷೆಯಲ್ಲಿಯೇ ನಾಟಕಗಳನ್ನು ಕಟ್ಟುತ್ತಾ ಹೋದೆ. ಪ್ಲಾಸ್ಟಿಕ್ ಸಮಸ್ಯೆ ನಮ್ಮ ಎಲ್ಲಾ ನಾಟಕಗಳಲ್ಲಿಯೂ ಒಂದೆಳೆಯಾಗಿ ಸದಾ ಕಾಣಿಸಿಕೊಳ್ಳುತ್ತಾ ಬಂತು. ಇದುವರೆಗೆ ನಾವು ಮಾಡಿದ ನಾಟಕಗಳಲ್ಲಿ ಪ್ರಧಾನವಾಗಿ ಕಂಡುಬಂದ ವಸ್ತುಗಳು ಪ್ಲಾಸ್ಟಿಕ್, ಜೈವಿಕ ಇಂಧನ, ಹಸಿರು ಮನೆ ಪರಿಣಾಮ, ಜಾಗತಿಕ ತಾಪಮಾನ, ಆವರ್ತ ಕೋಷ್ಟಕ, ಅಳಿವಿನ ಅಂಚಿನಲ್ಲಿರುವ ಜೀವಿಗಳು, ಯುವ ವಿಜ್ಞಾನಿಗಳ ಕುರಿತಾದದ್ದು.

ನಾಟಕ ಕಟ್ಟುವ ಪ್ರಕ್ರಿಯೆಯಲ್ಲಿ ತಮ್ಮನ್ನು ಉತ್ಕಟವಾಗಿ ತೊಡಗಿಸಿಕೊಂಡ, ನಟಿಸಿದ ಮಕ್ಕಳೇ ಪ್ರತೀ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನಗಳಿಸುತ್ತಿದ್ದರು. ಈ ನಾಟಕಗಳ ತಯಾರಿಯಲ್ಲಿ ಭಾಗವಹಿಸಿದ, ನಟಿಸಿದ ಮಕ್ಕಳು ಹಲವಾರು. ಅವರಲ್ಲಿ ಶಾಲೆಯ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳಿಸುತ್ತಾ, ನಾಟಕದ ಅನುಭವಗಳನ್ನು ದಾಖಲಿಸಲು ಮುಂದಾದರು. 'ಹೆಮ್ಮರ'ದ ಅನುಭವವಿದ್ದ ನಾನು ಹೆಗ್ಗಡಹಳ್ಳಿಯಲ್ಲಿ ಮತ್ತೊಂದು ಪತ್ರಿಕೆ ಹೊರಡಿಸಲು ಮುಂದಾದೆ. ಶಾಲೆಯ ಆವರಣದಲ್ಲಿದ್ದ ಶತಮಾನದಷ್ಟು ಹಳೆಯ ಅರಳೀಮರ ಪತ್ರಿಕೆಗೆ ಹೆಸರಿನ ಸ್ಫೂರ್ತಿಯಾಗಿ 'ಅಶ್ವೀಮರ'ವಾಯಿತು. ಕೈಬರಹ ಹೋಗಿ ಮುದ್ರಣ ಬಂತು. 'ಅಶ್ವೀಮರ' ಎಂಬ ಹೆಸರಲ್ಲೇ ಬ್ಲಾಗ್ ಕೂಡ ಆರಂಭಿಸಿದೆ. ಈಗ ಪತ್ರಿಕೆಯ ವ್ಯಾಪ್ತಿ ಅರಳೀಮರದಂತೆ ಹಿರಿದಾಯಿತು.

8, 9 ಮತ್ತು 10ನೇ ತರಗತಿ ಇದ್ದ ನಮ್ಮ ಶಾಲೆಯಲ್ಲಿ ಒಂದಿನ 8ನೇ ತರಗತಿ ಕಳಚಿಕೊಂಡು ಪಕ್ಕದಲ್ಲಿದ್ದ ಉನ್ನತೀಕರಿಸಿದ ಶಾಲೆಯೊಂದಿಗೆ ಸೇರಿಕೊಂಡಿತು. ಮಕ್ಕಳ ಸಂಖ್ಯೆಯಲ್ಲಿ ಧಿಡೀರ್ ಕುಸಿತವಾಯಿತು. 9ನೇ ತರಗತಿಗೆ ಬಂದು ಶಾಲೆಗೆ ಹೊಂದಿಕೊಳ್ಳುವಾಗಲೇ 10ನೇ ತರಗತಿಗೆ ಬಂದುಬಿಡುತ್ತಿದ್ದರು. ಮಕ್ಕಳ ಪಠ್ಯದ ಕಲಿಕೆಯ ಒತ್ತಡದಿಂದಾಗಿ ಸೃಜನಶೀಲ ಬರವಣಿಗೆ ಹಿಂದೆ ಬಿತ್ತು. 'ಅಶ್ವೀಮರ' ಪತ್ರಿಕೆ ಒಂದಷ್ಟು ಕಾಲ ವಿರಮಿಸುವಂತಾಯಿತು.

## 'ರಸಬಾಳೆ' ಚಿಗುರಿತು

ನಂಜನಗೂಡು ಎಂದಾಗ ತಕ್ಷಣ ನೆನಪಿಗೆ ಬರುವುದು ರಸಬಾಳೆ. ಪತ್ರಿಕೆಯನ್ನು ರೂಪಿಸುವ ನನ್ನ ಕನಸು ಮತ್ತೆ ಚಿಗುರಿದ್ದು 'ರಸಬಾಳೆ' ಎಂಬ ಗೋಡೆ ಪತ್ರಿಕೆ ಮೂಲಕ. ಗೋಡೆಯಲ್ಲಿ ರಸಬಾಳೆ ಕಾಣಿಸಿಕೊಂಡಿದ್ದೇ ಮಕ್ಕಳು ಬರೆದರು.

ವಾರಕ್ಕೊಮ್ಮೆ ಬರುವ 'ರಸಬಾಳೆ' ರಸಪ್ರಶ್ನೆಯನ್ನು ಹೊತ್ತು ತರುತ್ತಿತ್ತು. ಪ್ರಶ್ನೆಗೆ ಸರಿ ಉತ್ತರ ನೀಡಿದ ಮಕ್ಕಳಿಗೆ ಪುಸ್ತಕ ಬಹುಮಾನ. ಅದು ಅಂತಿಂಥ ಪುಸ್ತಕವಲ್ಲ. ಸ್ವತಃ ಲೇಖಕರೇ ಸಹಿ ಮಾಡಿದ ಪುಸ್ತಕ. ಕನ್ನಡ ನಾಡಿನ ಹಲವಾರು ಲೇಖಕರು ತಮ್ಮದೊಂದು ಕೃತಿಗೆ ಸಹಿ ಮಾಡಿ ಮಕ್ಕಳಿಗಾಗಿ ಕಳುಹಿಸಿದರು. ಇದು ಮಕ್ಕಳನ್ನು ಪುಳಕಿತರನ್ನಾಗಿಸಿತು.

## ಬಂತು ಪ್ರೊಜೆಕ್ಟರ್, ಲ್ಯಾಪ್‌ಟಾಪ್

ಆಧುನಿಕ ಸಾಧನಗಳು ಶಾಲೆಯನ್ನು ಪ್ರವೇಶಿಸುತ್ತಲೇ ನಮ್ಮ ಶಾಲೆಯ ಮಕ್ಕಳಿಗೆ ಇಡೀ ಜಗತ್ತು ಹೊಸದಾಗಿ ತೆರೆದುಕೊಂಡಿತು. ನಮ್ಮ ಮುಖ್ಯ ಶಿಕ್ಷಕರು ಈ ಸಾಧನಗಳನ್ನು ಬಳಸಿಕೊಳ್ಳಲು ಮತ್ತು ಉಸ್ತುವಾರಿಯನ್ನು ವಹಿಸಲು ನನಗೆ ಅನುಮತಿ ನೀಡಿದರು. ತರಗತಿಯ ಪಠ್ಯಗಳ ದೃಶ್ಯಗಳ ಜೊತೆ ಜೊತೆಗೆ, ನಮ್ಮ ಮಕ್ಕಳು ವಿಜ್ಞಾನ, ಜೀವ ಜಗತ್ತಿನ ಹಲವು ವಿಸ್ಮಯಗಳ ಸಾಕ್ಷ್ಯಚಿತ್ರಗಳನ್ನು ನೋಡುವಂತಾಯಿತು. ಅತ್ಯುತ್ತಮ ಶೈಕ್ಷಣಿಕ ದಾಖಲೆಗಳನ್ನು, ಜಗತ್ತಿನ




ಅತ್ಯುತ್ತಮ ಸಿನಿಮಾಗಳನ್ನು ಮಕ್ಕಳು ನೋಡುವಂತಾಯಿತು.

ಆಧುನಿಕ ಸಾಧನಗಳು ಹೆಗ್ಗಡಹಳ್ಳಿಯನ್ನು ಜಗತ್ತಿನ ಜೊತೆ ಬೆಸೆಯಿತು. ಸಾವಿರಾರು ಕಿ.ಮೀ. ದೂರವಿದ್ದ ಕನ್ನಡಿಗರೊಡನೆ ನಮ್ಮ ಮಕ್ಕಳು ಹೆಗ್ಗಡಹಳ್ಳಿಯಲ್ಲೇ ಕುಳಿತು ಮಾತನಾಡಿದರು. ದೆಹಲಿಯಿಂದ ಪುರುಷೋತ್ತಮ ಬಿಳಿಮಲೆ ಅವರು ಮಹಾತ್ಮ ಗಾಂಧಿ ಕುರಿತು, ಅಬುಧಾಬಿಯಿಂದ ವಿಜ್ಞಾನಿ ಡಾ. ದಿನೇಶ್ ಶೆಟ್ಟಿ ಅವರು ವಿಜ್ಞಾನ ಜಗತ್ತಿನ ಬಗ್ಗೆ, ಹೊನ್ನಾವರದಿಂದ ಡಾ. ಕೃಷ್ಣ ಗಿಳಿಯಾರ್ ಅವರು ಕ್ಯಾನ್ಸರ್ ಕುರಿತು, ಕೀನ್ಯಾದ ನೈರೋಬಿಯಿಂದ ಪ್ರಜ್ಞಾ ಶಾಸ್ತ್ರಿ ಅವರು ಆಫ್ರಿಕಾದ ಬಗ್ಗೆ, ಬೆಂಗಳೂರಿನಿಂದ ಎಸ್. ಪುಟ್ಟಾರಾಧ್ಯರು ಪಕ್ಷಿಗಳ ಕುರಿತು ಮಕ್ಕಳೊಂದಿಗೆ ಮಾತನಾಡಿ,


ರಸಬಾಳೆ

ಮಕ್ಕಳ ಸವಿಮನಸ್ಸಿನ 'ರಸಬಾಳೆ' ಪತ್ರಿಕೆ